ಶ್ರೀ ರಾಮಕೃಷ್ಣ ಹೆಗಡೆ.—ಇಂತಿಷ್ಟು ಹಣ ಎಷ್ಟು ಜನರಿಂದ ಬಾಕಿ ಇದೆ ಎಂದು ಹೇಳುವಂಥ ವಿವರೆ ನನ್ನ ಹತ್ತಿರವಿಲ್ಲ. ಅದನ್ನು ಬೇಕಾದರೆ ತರಿಸಿಕೊಡುತ್ತೇನೆ. ಸರ್ಕಾರಿ ಇಲಾಖೆಗಳಿಂದ ಎಂದರೆ ಬೇರೆ ಬೇರ ಸರ್ಕಾರಿ ಕೈಗಾರಿಕೆಗಳಿಂದ ಬರಬೇಕು. ಗಂಧದ ಎಣ್ಣೆ ಕಾರ್ಖಾನೆ ಮಾತ್ರವಲ್ಲ, ರೈಲ್ವೆಗಳು, ರಕ್ಷಣಾ ಇಲಾಖೆ, ಹಿಂದೂಸ್ತಾನ್ ಏರೋನಾಟಿಕಲ್ಸ್, ಟೆಲಿಫೋನ್ ಕಾರ್ಖಾನೆ, ವಿದ್ಯುಚ್ಛಕ್ತಿ ಮಂಡಳಿ ಹೀಗೆ ಬೇರೆ ಬೇರೆ ಇಲಾಖೆಗಳು ಮತ್ತು ಕಾರ್ಖಾನೆಗಳಿಂದ ಹಣ ಬರಬೇಕು. ಕಂಟ್ರಾಕ್ಟರುಗಳಿಂದ ಬರಬೇಕಾದ್ದು ಒಂದು ಕೋಟಿ ರೂಪಾಯಿಯವರೆಗೂ ಇದ್ದೆ ಅದರ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಏನು ಹಣ ಬಾಕಿ ಇರುತ್ತದೆ ಅದಕ್ಕೆ ಷ್ಯೂರಿಟಿ ಇರುತ್ತದೆ. ಬಾಕಿ ಇರುವ ಹಣದ ಮೇಲೆ ನೂರಕ್ಕೆ ಆರೂ ಕಾಲು ಪ್ರಕಾರ ಬಡ್ಡಿ ಹಾಕುತ್ತೇವೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಆಬ್ಕಾರಿ ತೆರಿಗೆ 1964ಕ್ಕೆ 50,94,654 ರೂಪಾಯಿ ಬಾಕಿ ನಿಂತಿದೆ. ಆಬ್ಕಾರಿ ಹರಾಜು ಹಾಕುವಾಗ ಎರಡು ತಿಂಗಳ ಅಡ್ವಾನ್ಸ್ ಸರ್ಕಾರದಲ್ಲಿರುತ್ತದೆ. ಹೀಗಿರುವಾಗ ಬಾಕಿ ನಿಲ್ಲಲು ಕಾರಣ ವಾದರೂ ಏನು ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇನ್ನೂ ಒಂದು ಸಲ ಹೇಳುತ್ತೇನ್ನೆ ಬಾಕಿ ಇರುದವುರಲ್ಲಿ ಹೆಚ್ಚಿ ಭಾಗ ಹೈದರಾಬಾದು ಭಾಗದಲ್ಲಿ ಕರ್ನಾಟಕ ಏಕೀಕರಣ ಆಗುವುದಕ್ಕಿಂತಲೂ ಮೊದಲಿ ನಿಂದ ಇದ್ದಂಥ ಬಾಕಿ. ಅದನ್ನು ಹಾಗೆಯೇ ಎಳೆದುಕೊಂಡು ಬಂದಿದ್ದೇವೆ. ವಸೂಲ್ಮಾಡುವುದಕ್ಕೆ ಸಾಧ್ಯವಿದೆ ಎಂದು ಹಾಗೆಯೇ ಇಟ್ಟುಕೊಂಡಿದ್ದೆವು. ಯಾವ ಯಾವ ಕಾರಣಗಳಿಂದ ಬಾಕಿ ಉಳಿಯಿತು ಎಂದು ಹೇಳುವುದು ಕಷ್ಟ. ಆದರೆ ಸಾಕಷ್ಟು ಸೆಕ್ಯೂರಿಟಿ ತೆಗೆದುಕೊಂಡು ಸಾಕಷ್ಟು ಮುಂಜಾಗರೂಕತೆಯನ್ನು ತೆಗೆದುಕೊಳ್ಳದೆ ಕೊಟ್ಟದ್ದರಿಂದ ಅದನ್ನು ವಸೂಲ್ಮಾಡುವುದು ಬಹಳ ಕಷ್ಟ.

MR. SPEAKER.—Next question.

SRI K. LAKKAPPA.—Sir, I want to put a supplementary. I have been trying to cath your eye.

MR. SPEAKER.—The Hon. Member was not able to catch my eye ?

ಶ್ರೀ ಕೆ. ಲಕ್ಕಪ್ಪ.—ಹೀಗಾದರೆ ವಿಪರೀತ ಕಷ್ಟ ಸ್ವಾಮಿ.

MR. SPEAKER.—Is it simply because he did not get a chance ?

ಶ್ರೀ ಕೆ. ಲಕ್ಕಪ್ಪ.—ನಾವು ಪ್ರಶ್ನೆಯನ್ನು ಕೇಳಬೇಕಾದರೆ ಹೇಗೆ ?

MR. SPEAKER.—Order, order. The member will kindly resume his seat.

ಶ್ರೀ ಕೆ. ಲಕ್ಕಪ್ಪ.—ನಾವು ಅಧ್ಯಕ್ಷರನ್ನಲ್ಲದೆ ಮತ್ತು ಯಾರನ್ನು ಕೇಳಬೇಕು, ಸ್ವಾಮಿ, ಪ್ರಶ್ನೆ ಹಾಕುವುದಕ್ಕೆ ?

MR. SPEAKER.—For every question if all the 208 members are to be allowed to put supplementary questions, how can the business go on ? Sri Lakkappa is not the only person who wants to put supplementaries. Does he know how many others are getting up ? What is it that Sri Laxmipathy said ? Members must have a slightly better judgment of the situation.

Depressed Class Students with Civil Engineering Diploma

*Q.—223. SRI M. N. KRISHNA SINGH (Jagalur).—

Will the Government be pleased to state :—

(*a*) the number of Polytechnics having Diploma Courses in the State ;

(*b*) the number of students who have passed Diploma in Civil Engineering during 1963-64 from these institutions ;

(*c*) out of them, the number of Depressed Class students ;

(*d*) whether it is a fact that the appointment of Depressed Class students as Supervisors who have passed Diploma in Civil Engineering has

been stopped suddenly from the year 1964 though such appointments were being made till 1964 ?

A.—SRI S. R. KANTHI (Minister for Education).—

(*a*) 31.
(*b*) 866.
(*c*) 28.
(*d*) No.

ಶ್ರೀ ಎಂ. ಎನ್. ಕೃಷ್ಣ ಸಿಂಗ್.—ರಾಜ್ಯದಲ್ಲಿ ನಾಲ್ಕನೆಯ ಯೋಜನೆಯಲ್ಲಿ ಹೊಸದಾಗಿ ಏನಾದರೂ ಪಾಲಿಟೆಕ್ನಿಕ್‌ಗಳನ್ನು ತೆರೆಯುವುದಕ್ಕೆ ಯೋಚನೆ ಮಾಡಿದ್ದೀರಾ, ಸ್ವಾಮಿ.

ಶ್ರೀ ಎಸ್. ಆರ್. ಕಂಠಿ.—ಇನ್ನೂ ನಾಲ್ಕನೆಯ ಯೋಜನೆ ಪೂರ್ತಿಯಾಗಿ ತೀರ್ಮಾನವಾಗಿಲ್ಲ. ನಾಲ್ಕನೆಯ ಯೋಜನೆಯಲ್ಲಿ ಹೆಚ್ಚು ಪಾಲಿಟೆಕ್ನಿಕ್‌ಗಳನ್ನು ತೆರೆಯುವ ಅವಕಾಶ ಇದ್ದಂತೆ ನನಗೆ ಕಾಣುವುದಿಲ್ಲ.

ಶ್ರೀ ಸಿ. ಜೆ. ಮುಕ್ತಣ್ಣಪ್ಪ.—ಪಡ್ಯೂಲ್ಡ್ ಕ್ಯಾಸ್ಟ್ ಮತ್ತು ಡಿಪ್ರೆಸ್ಡ್ ಕ್ಲಾಸಸ್‌ಗೆ ಸೇರಿದವರನ್ನು ಬಿಟ್ಟು ಪಾಲಿಟೆಕ್ನಿಗಳಲ್ಲಿ ಡಿಪ್ಲೋಮಾ ಪಡೆದಿರುವ ಸಿವಿಲ್ ಇಂಜಿನಿಯರಿಂಗ್ ವಿಭಾಗದವರು ಎಷ್ಟು ಜನ ನಿರುದ್ಯೋಗಿಗಳಾಗಿದ್ದಾರೆ, ಸ್ವಾಮಿ?

ಶ್ರೀ ಎಸ್. ಆರ್. ಕಂಠಿ.—ಇವತ್ತಿಗೆ ಎರಡು ಸಾವಿರದ ಇನ್ನೂರಕ್ಕೆ ಮೇಲ್ಪಟ್ಟು ನಿರುದ್ಯೋಗಿಗಳಿದ್ದಾರೆ

Irrigation of Lands under Hemavathi Anicut

Q.—309. SRI B. BYRAPPAJI (Turuvekere).—

Will the Government be pleased to state :—

(*a*) the extent of land proposed to be irrigated under the Hemavathi anicut near Gorur after it is constructed (Taluk-wise information may please be furnished) ;

(*b*) whether it is not a fact that the members of the Legislative Assembly and the public of Tiptur, Chicknayakanahalli, Sira, Turuvekere, Kunigal and Gubbi of Tumkur District, Nelamangala Taluk of Bangalore District have represented to the Government to rivise the estimate of the anicut so as to supply water to the said areas from the Hemavathi anikat ;

(*c*) if so, the action they have taken on the representation ?

A.—SRI S. NIJALINGAPPA (Chief Minister).—

(*a*) 1,C0,CC0 acres (in the taluks of Hassan, Holenarasipur, Arkalgud, Channarayapatna, Krishnarajpet and Pandavapur). Taluk-wise areas are under finalisation.

(*b*) Yes.

(*c*) The request was examined and found highly uneconomical.

ಶ್ರೀ ಬಿ. ಬೈರಪ್ಪಾಜಿ.—(ಇ) ಗೆ ಉತ್ತರವಾಗಿ ಬೇಡಿಕೆಯನ್ನು ಪರಿಶೀಲಿಸಲಾಗಿದ್ದು ಅದು ಹೆಚ್ಚಿನ ಮಿತವ್ಯಯಕಾರಿಯಲ್ಲವೆಂಬುದಾಗಿ ಕಂಡುಬಂದಿತು ಎಂದು ಹೇಳಿದ್ದಾರೆ. ಮೇಲ್ಕಂಡ ಅಭಿಪ್ರಾಯವನ್ನು ಮತ್ತೆ ಇದನ್ನು ಪುನರ್ಪರಿಶೀಲನೆ ಮಾಡುತ್ತೇವೆಂದು ಒಪ್ಪಿಕೊಂಡಿರುವುದರಿಂದ ಈ ಪ್ರಶ್ನೆಯು ಮೇಲೆ ನಾನು ಯಾವ ಪ್ರಶ್ನೆಗಳನ್ನೂ ಕೇಳುವುದಿಲ್ಲ, ಸ್ವಾಮಿ.